**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ</u>**

# ಸಿಸಿ ನಂಃ 38/2024

**ಪಿರ್ಯಾದಿ : ಸರ್ಕಾರದ ಪರವಾಗಿ**
ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆ ಮುಖೇನ.

- ವಿರುದ್ದ -

**ಆರೋಪಿ : ಮಾದೇಶ .ಸಿ**
ಬಿನ್ ಲೇಟ್ ಚಿಕ್ಕಮಾದಯ್ಯ
ವಯಸ್ಸು: 38 ವರ್ಷ
ವಾಸ - ಮಲ್ಲಿಗಹಳ್ಳಿ ಗ್ರಾಮ, ಯಳಂದೂರು ತಾಲ್ಲೂಕು,
ಚಾಮರಾಜನಗರ ಜಿಲ್ಲೆ.

## ಆರೋಪಣೆ

1. ದಿನಾಂಕಃ 03.03.2024 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಮಳವಳ್ಳಿ ತಾಲ್ಲೂಕು, ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ತಳಗವಾದಿ ಗೇಟ್ ಬಳಿ ಹಾದುಹೋಗಿರುವ ಮದ್ದೂರು ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಮೃತ ರವಿರವರು ಸದರಿ ದಿನದಂದು ಬೆಂಗಳೂರಿನಲ್ಲಿ ನಡೆದ ಕೃಷಿ ಮೇಳಕ್ಕೆ ಕೃಷಿ ಇಲಾಖಾ ವತಿಯಿಂದ ಹೋಗಿದ್ದು, ಕೃಷಿ ಮೇಳ ಮುಗಿಸಿ, ವಾಪಸ್ ತಮ್ಮೂರಿಗೆ ಹೋಗಲೆಂದು ಇತರರ ಜೊತೆ ಮದ್ದೂರು ಮಾರ್ಗವಾಗಿ ಹೋಗುವಾಗ ಟೀ ಕುಡಿಯುವ ಸಲುವಾಗಿ ತಳಗವಾದಿ ಗೇಟ್‌ನಲ್ಲಿ ರಸ್ತೆಯ ಎಡಭಾಗದಲ್ಲಿ ಇರುವ ಪ್ರಯಾಣಿಕರ ತಂಗುದಾಣದ ಮುಂಭಾಗದ ಖಾಲಿ ಜಾಗದಲ್ಲಿ ವಾಹನ ನಿಲ್ಲಿಸಿ, ಎಲ್ಲರೂ ವಾಹನದಿಂದ ಇಳಿದು ಟೀ ಕುಡಿಯಲೆಂದು ಮದ್ದೂರು ಮಳವಳ್ಳಿ ರಸ್ತೆಯನ್ನು ದಾಟಿ ಟೀ ಅಂಗಡಿಯ ಬಳಿ ಹೋಗಿದ್ದು, ಮೃತ ರವಿರವರು ಮೂತ್ರ ವಿಸರ್ಜನೆ ಮಾಡಲು ತಳಗವಾದಿ ಗೇಟ್ ಕಡೆಗಾದಂತೆ ಮದ್ದೂರು ಮಳವಳ್ಳಿ ಮುಖ್ಯ ರಸ್ತೆಯನ್ನು ದಾಟುತ್ತಿದ್ದಾಗ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ-52-ಎಂ-1752 ನಂಬರ್‌ನ ಚಾವರ್ಲೆಟ್ ತವೇರಾ ಕಾರನ್ನು ಮದ್ದೂರು ಕಡೆಯಿಂದ ಮಳವಳ್ಳಿ ಕಡೆಗೆ ಅತೀವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ

ಅಪಾಯವಾಗುವ ರೀತಿಯಲ್ಲಿ ಮತ್ತು ಇತರರಿಗೆ ಗಾಯ ಪಡಿಸುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಬಂದು ರಸ್ತೆಯ ಎಡಭಾಗದಲ್ಲಿ ಪ್ರಯಾಣಿಕರ ತಂಗುದಾಣ, ಬಲಭಾಗದಲ್ಲಿ ಗ್ರಾಮದ ಗೇಟ್ ಇದ್ದು, ಜನರು ರಸ್ತೆಯನ್ನು ದಾಟಬಹುದು ಎಂದು ತಿಳಿದಿದ್ದರೂ ಸಹ ಕಾರನ್ನು ನಿಧಾನ ಮಾಡದೇ ಮುಂದೆ ಹೋಗುತ್ತಿದ್ದ ಯಾವುದೋ ವಾಹನವನ್ನು ಹಿಂದಿಕ್ಕಲು ರಸ್ತೆಯ ಬಲಭಾಗಕ್ಕೆ ಚಾಲನೆ ಮಾಡಿ ರಸ್ತೆ ದಾಟುತ್ತಿದ್ದ ರವಿರವರಿಗೆ ಡಿಕ್ಕಿ ಪಡಿಸಿ, ಅಪಘಾತ ಉಂಟು ಮಾಡಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 279 ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ.

2. ಮೇಲ್ಕಂಡ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಮೇಲೆ ಹೇಳಿದ ಕಾರನ್ನು ಅತೀವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರವಿರವರಿಗೆ ಡಿಕ್ಕಿ ಪಡಿಸಿದ ಪರಿಣಾಮವಾಗಿ ಸದರಿಯವರು ರಸ್ತೆಯಲ್ಲಿ ಕೆಳಕ್ಕೆ ಬಿದ್ದು, ಎಡಗಾಲು, ತಲೆ ಮತ್ತು ಎಡಮೊಣಕೈಗೆ ಪೆಟ್ಟಾಗಿ ಚಿಕಿತ್ಸೆ ಫಲಕಾರಿಯಾಗದೇ ದಿ: 04.03.2024ರಂದು ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ಆ ಮೂಲಕ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 304(ಎ)ರ ರೀತ್ಯಾ ಈ ನ್ಯಾಯಾಲಯದ ಸಂಜ್ಞಾನದ ವ್ಯಾಪ್ತಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದೀರೆಂದು ನಿಮ್ಮ ವಿರುದ್ದ ಆಪಾದಿಸಿದೆ.

ಪ್ರಶ್ನೆಃ 1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ?

**ಉತ್ತರಃ**

ಪ್ರಶ್ನೆ. 2. ಆಪಾದನೆಯನ್ನು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆ
ಬಯಸುತ್ತೀರಾ ?

**ಉತ್ತರಃ**

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.)

ಸಹಿ**/-**

ದಿನಾಂಕ : 04.09.2024

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.**